

ಹೊತ್ತು ತುಂಬಿದ ಹಾಗೆ' ಎನ್ನುವುದು ಎರಡನೆಯ ಸಾಲು. 'ಹೊತ್ತು ತುಂಬಿದ ಹಾಗೆ' ಎಂದಿರುವಲ್ಲಿ 'ಹೊತ್ತನ್ನು ತುಂಬಿಸಿದ ಹಾಗೆ' ಎಂದು ಮನಸ್ಸಿನಲ್ಲೇ ಓದಿಕೊಳ್ಳಬೇಕು. ಮಧ್ಯಾಹ್ನಕ್ಕೆ ಉದಯಾಸ್ತಗಳನ್ನು ತುಂಬಿಸಿಕೊಂಡ ಗುಣ. ಬೆಳಗು, ಸಂಜೆಗಳನ್ನು ಹಾಡುವ ಕವಿಗಳು ಮಧ್ಯಾಹ್ನವನ್ನು ಹೆಚ್ಚು ನೋಡಿಲ್ಲ. ಮಧ್ಯಾಹ್ನದ ಆ ಬಿಸಿಲಿಗೆ ಎಂಥ ನಿರ್ಲಿಪ್ತಿ! ಆ ನಿರ್ಲಿಪ್ತಿಗೆ ಮೌನವೇ ಸರಿಯಾದ ಜೊತೆಗಾರ್ತಿ! ಇನ್ನು, 'ತುಂಬಿ ಬಂದಿತ್ತ' ಎನ್ನುವ ಮೂರನೆಯ ಸಾಲು. ಕಲ್ಯಾಣದ ಕ್ರಾಂತಿಯ ಹಿನ್ನೆಲೆಯಲ್ಲಿ ಕವಿಗೆ ಹೊಳೆದ ಸಾಲು. ಈ ಎರಡು ಪದಗಳ ಆಳ, ಚೆಲುವು ಅನ್ಯಾದೃಶ.

ನಿಮ್ಮ ಪ್ರಶ್ನೆಗೆ ಉತ್ತರ ಕೊಟ್ಟೆನೋ ಇಲ್ಲವೋ. ನನ್ನ ಮನಸ್ಸನ್ನು ಹೇಳಿದೆ ಅಷ್ಟೆ!

**◆ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವಿರಿ. ಕೃಷಿ, ಪರಿಸರ ಚಳವಳಿ, ಸಾಹಿತ್ಯ, ತಾಳಮದ್ದಳೆ ಇತ್ಯಾದಿ... ಇವೆಲ್ಲಾ ನೀವು ಆರಿಸಿಕೊಂಡಿರುವುದೋ ಅಥವಾ ಒದಗಿ ಬಂದದ್ದೋ?**